ಊರಿನಲ್ಲಿದ್ದಾರೆಂದು ಹೇಳಿ. Immediately we will ask them to take them into custody.

ಶ್ರೀ ಅರಗ ಜ್ಞಾನೇಂದ್ರ : ಅವರ ಸಿಬ್ಬಂದಿ ವರ್ಗ ಜಾಸ್ತಿ ಮಾಡದೇ ಹೋದರೆ ಇದನ್ನು ಗುರುತಿಸುವಂತದ್ದು ಕಷ್ಟ.

ಅಧ್ಯಕ್ಷರು : ಅವರು ಅವರ ಸಿಬ್ಬಂದಿ ಇರುವ ವ್ಯವಸ್ಥೆಯಲ್ಲಿ ಗುರುತಿಸಿರುವ ಮಾಹಿತಿಯನ್ನು ಸದನಕ್ಕೆ ಕೊಟ್ಟಿದ್ದಾರೆ. ಹೆಚ್ಚಿಗೆ ಮಾಹಿತಿ ನಿಮ್ಮ ಹತ್ತಿರವಿದ್ದರೆ, ಅವರ ಗಮನಕ್ಕೆ ಬಾರದಿದ್ದರೆ, ಅವರಿಗೆ ಮಾಹಿತಿ ಕೊಡಿ ತ್ವರಿತವಾಗಿ ಅವರು ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಅರಗ ಜ್ಞಾನೇಂದ್ರ : ಕರ್ನಾಟಕದ ನೆಮ್ಮದಿ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ಇನ್ನು ಈ ರೀತಿ ಆಗಬಾರದು.

ಅಧ್ಯಕ್ಷರು : ನಾನು ಅದೇ ಹೇಳಿದ್ದುದು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ನೆಮ್ಮದಿ ಇದೆ. ಆದರಲ್ಲಿ ಏನೂ ತೊಂದರೆ ಇಲ್ಲ. ನಮ್ಮ ರಾಜ್ಯಕ್ಕೆ ವಿಶೇಷವಾಗಿ ಯಾವುದೇ ತರಹದ ಸೂಚನೆ ಬಂದಿಲ್ಲ.

MR. SPEAKER : Besides that also I share the anxiety of the Hon'ble Members. If they have any valid information to say that whatever information that you have given as incorrect, they are at liberty to meet the Hon'ble Minister either in private or on the floor of the House, give the information, you can immediately ask your men to get into the job and secure those follows who are in this country with out valid Visa.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅಧ್ಯಕ್ಷರೆ, ಎಲ್ಲಾ ರಾಜ್ಯಗಳಿಗೆ ಸೂಚನೆ ಬರುವ ಹಾಗೆ ನಮ್ಮ ರಾಜ್ಯಕ್ಕೂ ಬಂದಿದೆ ಹೊರತು, ವಿಶೇಷವಾಗಿ ಬಂದಿಲ್ಲ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಮಾನ್ಯ ಅಧ್ಯಕ್ಷರೆ, ಭಟ್ಕಳದಲ್ಲಿ ಈ ರೀತಿ ಬಂದರು. ಅವರು ಯಾವುದೋ ಫೋರ್ಜರಿ ವೀಸಾ ಮಾಡಿಕೊಂಡು ಇತ್ಯಾದಿಗಳನ್ನು ಮಾಡಿಕೊಂಡು ಬಂದು ನೆಲಸಿ, ಅಲ್ಲಿ ಭಯೋತ್ಪಾದನೆಯಂತಹ ಅಥವಾ ಅಕ್ರಮವಾದಂತಹ ಚಟುವಟಿಕೆ ನಡೆಸುತ್ತಾ ಇರತಕ್ಕಂಥದ್ದು ನಮ್ಮ ಗಮನಕ್ಕೆ ಬಂದಿದೆ. ಇದು ಇಡೀ ರಾಜ್ಯವ್ಯಾಪಿ ಆಗಿರುವುದರಿಂದ ಇದರ ಬಗ್ಗೆ ಹೋಮ್ ಡಿಪಾರ್ಟಮೆಂಟ್ ಸ್ವಲ್ಪ ಗಂಭೀರವಾಗಿ ತನ್ನ ತನಿಖಾ ದಳವನ್ನು ಚುರುಕುಗೊಳಿಸುವ ಅಗತ್ಯತೆ ಇದೆ ಅನ್ನತಕ್ಕಂಥದ್ದು ನಮ್ಮ ಅನಿಸಿಕೆ.

MR. SPEAKER : The question does not merit a reply.

ಘಟಪ್ರಭಾ ಎಡದಂಡೆ ಕಾಲುವೆಯ ದುರಸ್ತಿ ಕಾಮಗಾರಿ.

140 - ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಧೋಳ್ ಮತ್ತು ಜಮಖಂಡಿ ತಾಲ್ಲೂಕಿನಲ್ಲಿ ಕಳೆದ 2 ವರ್ಷದಿಂದ ಘಟಪ್ರಭಾ ಎಡದಂಡೆ ಕಾಲುವೆಯನ್ನು ದುರಸ್ತಿ ಮಾಡದೇ ಇರುವುದರಿಂದ ಕಾಲುವೆಗಳು ಒಡೆದು ಹೋಗಿ ನೀರು ಸರಿಯಾಗಿ ಹಂಚಿಕೆಯಾಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ) ಸರ್ಕಾರ ಕಳೆದ 5 ವರ್ಷದಿಂದ ದುರಸ್ತಿ ಮತ್ತು ನಿರ್ವಹಣೆ ಕೆಲಸಕ್ಕೆ ಮುಧೋಳ್ ತಾಲ್ಲೂಕು ಮತ್ತು ಜಮಖಂಡಿ ತಾಲ್ಲೂಕಿನಲ್ಲಿ ಮಾಡಿದ ವೆಚ್ಚದ ಮೊತ್ತವೆಷ್ಟು (ಪ್ರತಿ ವರ್ಷ ತಾಲ್ಲೂಕುವಾರು)

ಇ) ಸೆಪ್ಟೆ ದುರಸ್ತಿ ಕೆಲಸವನ್ನು ಪ್ರಾರಂಭಮಾಡಲು ಸರ್ಕಾರ ಕೈಗೊಂಡ ಕ್ರಮವೇನು ಮತ್ತು ದುರಸ್ತಿಗೆ ಒದಗಿಸಿದ ಮೊತ್ತವೆಷ್ಟು.

ಈ) ಸರ್ಕಾರ ದಿ: 31-5-96ರೊಳಗಾಗಿ ದುರಸ್ತಿ ಕಾರ್ಯವನ್ನು ಪೂರ್ಣ ಮುಗಿಸಲು ಸರ್ಕಾರದ ಸಿದ್ಧವಿದೆಯೇ, ಹಾಗಿದ್ದಲ್ಲಿ ಪ್ರತಿ ತಿಂಗಳು ಸರ್ಕಾರ ಎಷ್ಟು ಹಣ ಬಿಡುಗಡೆ ಮಾಡುವುದು.

ಉ) 1995-96ನೆಯ ಸಾಲಿನಲ್ಲಿ ಬೆಳಗಾಂ ಮತ್ತು ವಿಜಾಪುರ ಜಿಲ್ಲೆಯಲ್ಲಿ ಬರುವ ಎಡದಂಡೆ ಕಾಲುವೆ ನಿರ್ವಹಣೆ ಮತ್ತು ದುರಸ್ತಿಗೆ ಪ್ರತಿ ಉಪ ವಿಭಾಗಕ್ಕೆ ಬಿಡುಗಡೆ ಮಾಡಿದ ಹಣದ ಮೊತ್ತವೆಷ್ಟು?

ಶ್ರೀ ಹೆಚ್. ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ದುರಸ್ತಿ ಹಾಗೂ ನಿರ್ವಹಣೆಗಾಗಿ ದೊರೆಯುತ್ತಿರುವ ಅನುದಾನ ಬಹಳ ಕಡಿಮೆ ಇರುತ್ತದೆ. ಒದಗಿಸಿದ ಅನುದಾನದಲ್ಲಿ ದುರಸ್ತಿ ಕೆಲಸ ಕೈಗೊಳ್ಳಲಾಗಿದೆ. ಕಾಲುವೆಗಳು ಒಡೆದುಹೋಗಿ ನೀರಾವರಿ ತೊಂದರೆಯಾದಂತಹ ದೊಡ್ಡ ಸಮಸ್ಯೆಗಳು ಇರುವುದಿಲ್ಲ.

ಆ)

ವರ್ಷ	ಮುಧೋಳ ತಾಲ್ಲೂಕು	ಜಮಖಂಡಿ ತಾಲ್ಲೂಕು
	(ಲಕ್ಷ ರೂ.ಗಳು)	(ಲಕ್ಷ ರೂ.ಗಳು)
1994-95	40.32	49.36
1993-94	21.80	52.20
1992-93	35.67	58.89
1991-92	37.84	57.64
1990-91	39.37	46.50

ಇ) 1995-96ನೇ ಕಾರ್ಯಕ್ರಮದ ಪ್ರಕಾರ ನೀರು ಬಿಡುವ ಮೊದಲು ಅನುದಾನವನ್ನು

ಪರಿಗಣಿಸಿ ಕೆಲಸಗಳನ್ನು ಮುಗಿಸಲಾಗಿದೆ. 1996-97ನೇ ಸಾಲಿನ ಅನುದಾನ ಏಪ್ರಿಲನಲ್ಲಿ ಬಿಡುಗಡೆಯಾಗುವುದು. ಅನುದಾನವನ್ನು ಗಮನಿಸಿ ದುರಸ್ತಿ ಕೆಲಸವನ್ನು ಮುಂಗಾರು 1996ರ ನೀರು ಬಿಡುವುದರೊಳಗಾಗಿ ಕೈಕೊಳ್ಳಲಾಗುವುದು.

ಈ) 31-5-96ರೊಳಗಾಗಿ ಎಲ್ಲ ಅವಶ್ಯಕ ದುರಸ್ತಿ ಕೆಲಸಗಳನ್ನು ಕೈಗೊಳ್ಳಲು ಈಗಾಗಲೇ ಯೋಜಿಸಿದೆ. ದುರಸ್ತಿ ಕೆಲಸ ಕೈಗೊಳ್ಳಲು ಏಪ್ರಿಲ್ 1996 ರಲ್ಲಿ ಮತ್ತು ಮೇ 1996ರಲ್ಲಿ ಪ್ರತಿ ತಿಂಗಳು ರೂ. 50 ಲಕ್ಷ ಅಂದರೆ ಒಟ್ಟು ರೂಪಾಯಿ 100 ಲಕ್ಷ ಅನುದಾನದ ಅವಶ್ಯಕತೆ ಇದೆ.

ಉ) 1995-96ರ ಸಾಲಿನಲ್ಲಿ ಜನವರಿ 1996ರವರೆಗೆ ನಿರ್ವಹಣೆ ಮತ್ತು ದುರಸ್ತಿಗಾಗಿ ಘಟಪ್ರಭಾ ಎಡದಂಡೆ ಕಾಲುವೆ ವೃತ್ತದಲ್ಲಿಯ ವಿಭಾಗಗಳಿಗೆ ವಿಭಾಗವಾರು ಬಿಡುಗಡೆಯಾದ ಹಣದ ಮೊತ್ತ ಈ ಕೆಳಗಿನಂತಿವೆ: ಈ ವೃತ್ತದಡಿ ಮೂರು ವಿಭಾಗಗಳು ಇರುತ್ತವೆ.

ವಿಭಾಗ	ಬಿಡುಗಡೆ ಮಾಡಿದ ಮೊತ್ತ
ಘಎಡಂ ಕಾಲುವೆ ವಿಭಾಗ ನಂ.1 ಘಟಪ್ರಭಾ	ರೂ. 72.53 ಲಕ್ಷ
ಘಎಡಂ ಕಾಲುವೆ ವಿಭಾಗ ನಂ.2, ಜಮಖಂಡಿ	ರೂ. 41.83 ಲಕ್ಷ
ಘಎಡಂ ಕಾಲುವೆ ವಿಭಾಗ ನಂ.3, ಬೀಳಗಿ	ರೂ. 48.85 ಲಕ್ಷ

ಶ್ರೀ ಗೋವಿಂದ ಎಂ. ಕಾರಜೋಳ : ಸನ್ಮಾನ್ಯ ಅಧ್ಯಕ್ಷರೆ, 1990-91ನೇ ಇಸವಿಯಿಂದ 1994-95ನೇ ಸಾಲಿನವರೆಗೆ ಮುಧೋಳ್ ತಾಲ್ಲೂಕಿನ ದುರಸ್ತಿ ಮತ್ತು ನಿರ್ವಹಣೆ ಕೆಲಸಗಳಿಗೆ ಹಣವನ್ನು ಕಡಿಮೆ ಬಿಡುಗಡೆ ಮಾಡಿದ್ದಾರೆ. ಮತ್ತು ಜಮಖಂಡಿ ತಾಲ್ಲೂಕಿಗೆ ಹೆಚ್ಚು ಬಿಡುಗಡೆ ಮಾಡಿದ್ದಾರೆ. ಈ ಹಣ ಹೆಚ್ಚು ಕಡಿಮೆ ಬಿಡುಗಡೆ ಮಾಡಲು ಯಾವ ಅಳತೆಗೋಲು ಸರ್ಕಾರದವರು ಮಾಡಿದ್ದಾರೆ, ಮತ್ತು ಅನುಸರಿಸುತ್ತಿದ್ದಾರೆ ದಯವಿಟ್ಟು ತಿಳಿಸಬೇಕು. ಎರಡನೆಯದು 15.2.1996 ರಿಂದ ಕಾಲುವೆಯಲ್ಲಿ ನೀರು ಬಿಡುವುದನ್ನು ನಿಲ್ಲಿಸಿದ ತಕ್ಷಣ ದುರಸ್ತಿ ಕಾರ್ಯ ಪ್ರಾರಂಭ ಮಾಡಲು ಸರ್ಕಾರಕ್ಕೆ ಇರುವ ತೊಂದರೆ ಏನು?

ಶ್ರೀ ಎಂ. ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾನು ತಿಳಿಸಿದಂತೆ 1991-92ನೇ ಸಾಲಿನಿಂದ ಹಿಡಿದು ಪ್ರತಿ ಸಂದರ್ಭದಲ್ಲಿ ಕೂಡ ನಮಗೆ 64,735 ಹೆಕ್ಟೇರ್‌ಗಳು ಮುಧೋಳ್ ತಾಲ್ಲೂಕಿನಲ್ಲಿ ಬರುತ್ತವೆ. ಜಮಖಂಡಿ ತಾಲ್ಲೂಕಿನಲ್ಲಿ ಬರತಕ್ಕಂಥದ್ದು ಕೇವಲ 47.241 ಹೆಕ್ಟೇರಗಳು. ಆದ್ದರಿಂದ ಕೊಟ್ಟಿರತಕ್ಕಂತಹ ಅನುದಾನ ಕಡಿಮೆ. ದುರಸ್ತಿ ಮಾಡತಕ್ಕಂಥದ್ದು ಆಯಾ ಕಾಮಗಾರಿಗಳ ಮೇಲೆ ಅವಲಂಬಿತ ಆಗಿರುತ್ತದೆ. ಸ್ವಲ್ಪ ಕಡೆಗೆ ಜಮಖಂಡಿಯಲ್ಲಿ ಹೆಚ್ಚು ದುರಸ್ತಿ ಅವಶ್ಯಕತೆ ಇದ್ದುದರಿಂದ ಹಿಂದೆ ಹಣ ಬಿಡುಗಡೆ ಮಾಡಿದ್ದಾರೆ, ಮತ್ತು ಅನುದಾನ ಕೊಡತಕ್ಕಂಥದ್ದು ಕಡ್ಡಾಯ.

ಒಂದು ಹಕ್ಟೇರಗೆ 150 ರೂಪಾಯಿಗಳು ಎಂದು ಮಾತ್ರ ಇರುವುದರಿಂದ ಹೆಚ್ಚು ಕಡಿಮೆ ಅನುದಾನ ಇದೆ. ಸನ್ಮಾನ್ಯ ಅಧ್ಯಕ್ಷರೆ, ಆ ಕಾರಣದಿಂದ ಮಾನ್ಯ ಸದಸ್ಯರ ಆತಂಕವನ್ನು ನಾವು ನೋಡುತ್ತಿದ್ದೇವೆ. ಈಗ ನೀರನ್ನು ನಿಲ್ಲಿಸಿದ ತಕ್ಷಣ ದುರಸ್ತಿ ಕೆಲಸವನ್ನು ಕೂಡ ಲಭ್ಯವಿರುವ ಅನುದಾನದಲ್ಲಿ ಪ್ರಾರಂಭ ಮಾಡುತ್ತೇವೆ.

ಶ್ರೀ ಗೋವಿಂದ ಎಂ. ಕಾರಜೋಳ : ಮುಧೋಳ್ ತಾಲ್ಲೂಕಿನಲ್ಲಿ ನೀರಾವರಿ ಕ್ಷೇತ್ರ ಹೆಚ್ಚು ಇದೆ. ಕಾಲುವೆ ಲೆಂತ್ ಕೂಡ ಹೆಚ್ಚು ಇದೆ. ಆದರೆ ಅನುದಾನ ಬಿಡುಗಡೆ ಮಾಡಿರುವುದರಲ್ಲಿ ಮಾತ್ರ ಜಮಖಂಡಿ ತಾಲ್ಲೂಕಿಗೆ ಹೆಚ್ಚು ಮಾಡಿ, ಮುಧೋಳ್ ತಾಲ್ಲೂಕಿಗೆ ಕಡಿಮೆ ಮಾಡಿದ್ದಕ್ಕೆ ಸರ್ಕಾರದಿಂದ ಒಂದು ನಿರ್ದಿಷ್ಟವಾದ ಉತ್ತರ ಸಿಗಲಿಲ್ಲ. ದಯಮಾಡಿ ಉತ್ತರ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೆ ನಿಜವಾಗಿಯೂ ಶಾಸಕರ ಆತಂಕ ಕೂಡ ಗೊತ್ತಿದೆ. ಅಲ್ಲಿ 64735 ಹೆಕ್ಟೇರ್ ಇರುವುದರಿಂದ ಹೆಚ್ಚು ಅನುದಾನ ಬರಬೇಕೆಂದು ಹೇಳುತ್ತಿದ್ದಾರೆ. ಆದರೆ ಹೆಚ್ಚಿನ ದುರಸ್ತಿ ಅವಶ್ಯಕತೆ ಇರತಕ್ಕಂಥದ್ದು ಜಮಖಂಡಿ ತಾಲ್ಲೂಕಿನ ಭಾಗದಲ್ಲಿ, ಅಲ್ಲಿ ಸ್ವಲ್ಪ ಹೆಚ್ಚು ಆಗಬಹುದು. ಹಿಂದೆ 1991-92 ರಿಂದ 1993-94ರವರೆಗೆ ಕೊಟ್ಟಿರತಕ್ಕಂತಹ ಹಣದಲ್ಲಿ ಜಮಖಂಡಿ ತಾಲ್ಲೂಕಿಗೆ ಹೆಚ್ಚು ಇದೆ. ಅದನ್ನು ಒಪ್ಪಿಕೊಳ್ಳುತ್ತೇನೆ. ಆದರೆ 1994-95ರ ಸಾಲಿನಲ್ಲಿಯೂ ಕೂಡ 40 ಲಕ್ಷ ಮುಧೋಳ್ ತಾಲ್ಲೂಕಿನಲ್ಲಿ ಕೊಟ್ಟಿದ್ದರೆ, 49 ಲಕ್ಷ ಅದರಲ್ಲಿ ಕೊಟ್ಟಿದ್ದಾರೆ. ಆದರೆ ಈ ವರ್ಷ 1995-96ನೇ ಸಾಲಿನಲ್ಲಿ ಘಟಪ್ರಭಾ ಎಡದಂಡೆ ಕಾಲುವೆಯ ಕೆಲಸಕ್ಕೆ 72 ಲಕ್ಷ ರೂಪಾಯಿಗಳು ಹಣ ಬಿಡುಗಡೆ ಆಗಿರುವುದರಿಂದ ಅದನ್ನು ಜಮಖಂಡಿ ಭಾಗಕ್ಕೆ 41.83 ಲಕ್ಷ, ಅದೇ ರೀತಿ ಬೀಳಗಿ ಭಾಗದಲ್ಲಿ 48.65 ಬಿಡುಗಡೆ ಮಾಡಿದ್ದೇವೆ. ಆದ್ದರಿಂದ 1995-96ರ ಸಾಲಿನಲ್ಲಿ ಖಂಡಿತವಾಗಿ ನಾವು ಹೆಚ್ಚು ಹಣವನ್ನು ಕೊಟ್ಟಿದ್ದೇವೆ. ಮುಂದೆ ಕೂಡ ಅದೇ ಅನುಪಾತದಲ್ಲಿ ಕೊಡುತ್ತೇವೆ ಎನ್ನುವ ಮಾತನ್ನು ತಮ್ಮ ಮೂಲಕ ಭರವಸೆ ಕೊಡುತ್ತೇನೆ.

ಸಾದಲಿ-ಹೊಸಕೆರೆ ಕೋಡಿಯ ಉಡಾವಣೆಯಿಂದ ಮುಳುಗಡೆಯಾಗಲಿರುವ ಜಮೀನಿನ ಸ್ವಾಧೀನತೆ.

141 - ಶ್ರೀ ವಿ. ಮುನಿಯಪ್ಪ (ಶಿಡ್ಲಘಟ್ಟ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆಯ ಶಿಡ್ಲಘಟ್ಟ ತಾಲ್ಲೂಕಿನ ಸಾದಲಿ-ಹೊಸಕೆರೆಯ ಕೋಡಿ (ವೇಸ್ಟ್‌ವೇರ್) ಯನ್ನು ಯಾವ ಸಾಲಿನಲ್ಲಿ ಉಡಾವಣೆ ಮಾಡಲಾಗಿರುತ್ತದೆ.

ಆ) ಈ ಉಡಾವಣೆಯಿಂದ ಮುಳುಗಡೆಯಾಗಿರುವ ಒಟ್ಟು ವಿಸ್ತೀರ್ಣವನ್ನು (ಸರ್ವೆ ನಂಬರ್‌ವಾರು ವಿವರಗಳನ್ನು ನೀಡುವುದು).

ಇ) ಈ ವಿಷಯಲ್ಲಿನ ಭೂ ಸ್ವಾಧೀನ ಪ್ರಕ್ರಿಯೆಗಳು ಈಗ ಯಾವ ಹಂತದಲ್ಲಿವೆ?

ಶ್ರೀಮತಿ ಲೀಲಾದೇವಿ ಆರ್ ಪ್ರಸಾದ್ (ಸಣ್ಣ ನೀರಾವರಿ ರಾಜ್ಯ ಸಚಿವರು) :